## ರೈತರ ಆದಾಯ ಹೆಚ್ಚಿಸಲು ಕಾರ್ಯತಂತ್ರ | ರೈತರು-ವರ್ತಕರನ್ನು ಬೆಸೆಯಲಿರುವ ಆನ್‌ಲೈನ್ ವ್ಯವಸ್ಥೆ

# ಏಕೀಕೃತ ಆನ್‌ಲೈನ್ ಕೃಷಿ ಮಾರುಕಟ್ಟೆ ಶುರು

■ **ಎಕನಾಮಿಕ್ ಟೈಮ್ಸ್** ಹೊಸದಿಲ್ಲಿ

ರೈತರ ಬೆಳೆಗೆ ನ್ಯಾಯಯುತ ಬೆಲೆ ದೊರಕಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ಮತ್ತು ಮಧ್ಯವರ್ತಿಗಳನ್ನು ದೂರವಿಡುವ ನಿಟ್ಟಿನಲ್ಲಿ ರಾಷ್ಟ್ರೀಯ ಆನ್ ಲೈನ್ ಕೃಷಿ ಮಾರುಕಟ್ಟೆಗೆ (ಇ-ಟ್ರೇಡಿಂಗ್ ಪ್ಲಾಟ್‌ಫಾರ್ಮ್) ಕೇಂದ್ರ ಸರಕಾರವು ಗುರುವಾರ ಚಾಲನೆ ನೀಡಿದೆ.

'ಇ-ನ್ಯಾಮ್' ಉದ್ಘಾಟಿಸಿದ ಪ್ರಧಾನಿ ಮೋದಿ, ''ಈ ಯೋಜನೆಯು ಕೃಷಿ ವಲಯದಲ್ಲಿ ಮಹತ್ವದ ಬದಲಾವಣೆ ತರಲಿದೆ. ರೈತರಿಗಷ್ಟೆ ಅಲ್ಲ, ವ್ಯಾಪಾರಿ ಮತ್ತು ಗ್ರಾಹಕರಿಗೂ ಲಾಭ ದೊರೆಯಲಿದೆ,'' ಎಂದರು.

ದೇಶದ ಎಂಟು ರಾಜ್ಯಗಳಲ್ಲಿನ ಒಟ್ಟು 21 ಮಾರುಕಟ್ಟೆಗಳನ್ನು ಆನ್‌ಲೈನ್ ಮಾರುಕಟ್ಟೆಗೆ ಅಳವಡಿಸಲಾಗಿದ್ದು, ಇದರಿಂದ ಕೃಷಿ ಉತ್ಪನ್ನಗಳಿಗೆ ಏಕೀಕೃತ ರಾಷ್ಟ್ರೀಯ ಮಾರುಕಟ್ಟೆ ಸೃಷ್ಟಿಯಾಗುತ್ತದೆ. ಮುಂದಿನ ಹಂತಗಳಲ್ಲಿ ದೇಶದಲ್ಲಿನ ಎಲ್ಲ ಮಾರುಕಟ್ಟೆಗಳೂ ಇದರ ವ್ಯಾಪ್ತಿಗೆ ಬರಲಿವೆ.

ಒಂದು ರಾಷ್ಟ್ರ ಒಂದೇ ಮಾರುಕಟ್ಟೆ ಪರಿಕಲ್ಪನೆಯ ರಾಷ್ಟ್ರೀಯ ಕೃಷಿ ಮಾರುಕಟ್ಟೆ (ಇನ್ಯಾಮ್) ಎನ್ನುವ ಈ ಆನ್‌ಲೈನ್ ಪ್ಲಾಟ್‌ಫಾರ್ಮ್ ರೈತರು ಮತ್ತು ವ್ಯಾಪಾರಿಗಳನ್ನು ಬೆಸೆಯಲಿದೆ. ಇ-ನ್ಯಾಮ್‌ನಲ್ಲಿ ಮುಂದಿನ ದಿನಗಳಲ್ಲಿ ದೇಶದಲ್ಲಿನ 585 ಸಗಟು ಮಾರುಕಟ್ಟೆಗಳನ್ನು(ಎಪಿಎಂಸಿ) ಬೆಸೆಯಲಾಗುತ್ತದೆ. ದೇಶದಲ್ಲಿ ಪ್ರಸ್ತುತ 7,000 ಸಗಟು ಮಾರುಕಟ್ಟೆಗಳಿದ್ದು, ಈ ಯೋಜನೆಗೆ ಗುಜರಾತ್, ತೆಲಂಗಾಣ, ರಾಜಸ್ಥಾನ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಹರಿಯಾಣಾ, ಜಾರ್ಖಂಡ್, ಹಿಮಾಚಲ ಪ್ರದೇಶಗಳನ್ನು ಮೊದಲ ಹಂತದಲ್ಲಿ ಆಯ್ದುಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ವಿಳಾಸ:
http://enam.gov.in



### 12 ಪದಾರ್ಥಗಳು

ಮೊದಲಹಂತದಲ್ಲಿಇ-ನ್ಯಾಮ್‌ನಲ್ಲಿಆಲೂಗಡ್ಡೆ, ಕಪ್ಪುಕಡಲೆ, ಭತ್ತ, ಗೋಧಿ, ಮೆಕ್ಕೆಜೋಳ, ಅರಿಶಿನ, ಈರುಳ್ಳಿ, ಸಾಸಿವೆ, ಹುಣಿಸೆಹಣ್ಣು ಸೇರಿದಂತೆ 12 ಕೃಷಿ ಉತ್ಪನ್ನಗಳ ವಹಿವಾಟು ನಡೆಯಲಿದೆ. ನಂತರದ ದಿನಗಳಲ್ಲಿ ಇನ್ನಷ್ಟು ಉತ್ಪನ್ನಗಳನ್ನು ಸೇರ್ಪಡೆ ಮಾಡುವುದಾಗಿ ಸರಕಾರ ಹೇಳಿದೆ.

### ಕೃಷಿಕರಿಗೆ ಏನಿದರ ಲಾಭ?

- ಇದೊಂದು ಆನ್‌ಲೈನ್ ಆಧರಿತ ಏಕ ಮಾರುಕಟ್ಟೆಯಾಗಿದೆ. ರೈತರು ತಮ್ಮ ಸಮೀಪದ ಮಾರುಕಟ್ಟೆಗೆ ತೆರಳಿ, ತಮ್ಮ ಉತ್ಪನ್ನಗಳನ್ನು ಇದರ ಮೂಲಕ ಪ್ರದರ್ಶಿಸಬಹುದು. ವ್ಯಾಪಾರಿಗಳು ತಮ್ಮ ಬೆಲೆಯನ್ನು ಸೂಚಿಸಬಹುದು.
- ರೈತರಿಗೆ ಇಲ್ಲಿ ಮಧ್ಯವರ್ತಿಗಳ ಕಾಟ ಇರುವುದಿಲ್ಲ. ಯಾರು ಹೆಚ್ಚಿನ ಬೆಲೆ ಸೂಚಿಸುತ್ತಾರೆಯೋ ಅವರಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ. ರೈತರಿಗೆ ಸ್ಪರ್ಧಾತ್ಮಕ ಬೆಲೆ ದೊರೆಯಲಿದೆ.
- ವ್ಯವಹಾರ ವೆಚ್ಚ ತಗ್ಗುತ್ತದೆ. ಒಂದೇ ಲೈಸನ್ಸ್ ಪಡೆದು ದೇಶದ ಎಲ್ಲ ಮಾರುಕಟ್ಟೆಗಳಲ್ಲೂ ವ್ಯವಹಾರ ನಡೆಸಬಹುದಾಗಿದೆ.

### ಕರ್ನಾಟಕದ ಮಾದರಿ ಅನುಸರಿಸಿದ ಮೋದಿ

ಕರ್ನಾಟಕದ ಮಾದರಿಯಲ್ಲಿ ಮೋದಿ ಸರಕಾರವು ಏಕೀಕೃತ ಆನ್‌ಲೈನ್ ಕೃಷಿ ಮಾರುಕಟ್ಟೆ ಯೋಜನೆಗೆ ಚಾಲನೆ ನೀಡಿದೆ. ಕೃಷಿ ಉತ್ಪನ್ನಗಳಿಗೆ ಸ್ಪರ್ಧಾತ್ಮಕ ಬೆಲೆ ಕೊಡಿಸುವಲ್ಲಿ ಕರ್ನಾಟಕ ಸರಕಾರವು 2014ರಲ್ಲಿ ರಾಷ್ಟ್ರೀಯ ಇ-ಮಾರ್ಕೆಟಿಂಗ್ ಸರ್ವಿಸ್ ಪ್ರೈವೇಟ್ ಲಿಮಿಟೆಡ್ ಎಂಬ ಸರಕಾರಿ ಸಂಸ್ಥೆಯನ್ನು ಹುಟ್ಟುಹಾಕಿತ್ತು. ಕರ್ನಾಟಕದಲ್ಲಿ ಯಶಸ್ವಿಯಾದ ಈ ಮಾದರಿಯನ್ನು ನಂತರ ಆಂಧ್ರಪ್ರದೇಶವೂ ಅನುಕರಿಸಿತ್ತು. 26 ರಾಜ್ಯಗಳ ಸಹಕಾರ ಇಲಾಖೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಕರ್ನಾಟಕಕ್ಕೆ ಭೇಟಿ ನೀಡಿದ್ದು, ಯೋಜನೆ ಬಗ್ಗೆ ಅಧ್ಯಯನ ನಡೆಸಿದ್ದಾರೆ.